International Journal of Kannada Research
www.kannadajournal.com

ISSN: 2454–5813
IJKR 2020; 6(3): 09-14
© 2020 IJKR
www.kannadajournal.com
Received: 10-05-2020
Accepted: 12-06-2020

**ಡಾ. ಕೆ ಗುರುಸ್ವಾಮಿ**
ಸಮಾಜ-ವಿಜ್ಞಾನ ಶಿಕ್ಷಕರು
ಅಲ್ಪಸಂಖ್ಯಾತರ ಮೊರಾರ್ಜಿ
ದೇಸಾಯಿ ವಸತಿ ಶಾಲೆ,
ಹೊಳೆನರಸೀಪುರ, ಹಾಸನ.

**Corresponding Author:**
**ಡಾ. ಕೆ ಗುರುಸ್ವಾಮಿ**
ಸಮಾಜ-ವಿಜ್ಞಾನ ಶಿಕ್ಷಕರು
ಅಲ್ಪಸಂಖ್ಯಾತರ ಮೊರಾರ್ಜಿ
ದೇಸಾಯಿ ವಸತಿ ಶಾಲೆ,
ಹೊಳೆನರಸೀಪುರ, ಹಾಸನ.

# ಬ್ಲಾಕ್‌ಪ್ಯಾಂಥರ್ಸ್ ಪಾರ್ಟಿಯ ಕ್ರಾಂತಿಯ ಕಹಳೆ: ಭೀಮಸೇನೆ ಹಾಗೂ ದಲಿತ್ ಪ್ಯಾಂಥರ್ಸ್‌ಗಳ ಮೇಲಿನ ಠೇಂಕಾರ

**ಡಾ. ಕೆ ಗುರುಸ್ವಾಮಿ**

ಬಹುಕಾಲದಿಂದಲೂ ಪ್ರಪಂಚದಾದ್ಯಂತ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಶೋಷಕರಿಂದ ನಿರ್ಲಕ್ಷ್ಯಕ್ಕೊಳಗಾದ ಶೋಷಿತ ಜನಸಂಕುಲಗಳ ಮೇಲೆ ಅಸಮಾನತೆ, ಅನ್ಯಾಯ, ಅಕ್ರಮ, ಲಿಂಗತಾರತಮ್ಯ, ವರ್ಣಬೇಧ ನೀತಿ, ಜನಾಂಗೀಯ ದ್ವೇಷ, ಅಸ್ಪೃಶ್ಯತೆ, ಜಾತೀಯತೆ, ದಾಸ್ಯ ಪದ್ಧತಿ, ಜೀತಗಾರಿಕೆ, ಗುಲಾಮಗಿರಿ, ಹೆಣ್ಣುಮಕ್ಕಳ ಮೇಲಿನ ಅಮಾನವೀಯ ದೌರ್ಜನ್ಯಗಳು, ಹಲ್ಲೆ, ಕೊಲೆ, ಅತ್ಯಾಚಾರ, ಮೂಲಭೂತ ಸವಲತ್ತುಗಳಿಂದ ವಂಚನೆ, ಉದ್ಯೋಗವಕಾಶಗಳಿಂದ ವಂಚನೆ ಮುಂತಾದ ಅಮಾನುಷ ಕಟ್ಟುಬದ್ಧ ಅಭ್ಯಾಸಗಳು ತಾಂಡವವಾಡುತ್ತಿದ್ದವು.ಈ ತೆರನಾದ ಅನಿಷ್ಟ ಆಚರಣೆಗಳು ಮಾವ ಸಮಾಜಕ್ಕೆ ಕಳಂಕಪ್ರಾಯವಾಗಿದ್ದವು. ಇಂತಹ ಮಾನಸಿಕ, ಬೌದ್ಧಿಕ ಹಾಗೂ ಭೌತಿಕ ಹಿಂಸೆಗಳಿಂದ ಶೋಷಣೆಗೊಳಗಾದ ಜನಾಂಗಗಳು ಘಾಸಿಗೊಂಡು ಕುಗ್ಗಿಹೋಗಿದ್ದರು. ಜೊತಗೆ ಬಾಯಿದ್ದರೂ ತಮ್ಮ ಸಿಗಬೇಕಾದ ಮೂಲಭೂತ ಹಕ್ಕುಗಳನ್ನು ಕೇಳಲಾಗದೆ, ಈ ಅನ್ಯಾಯಗಳನ್ನು ಧೈರ್ಯದಿಂದ ಪ್ರಶ್ನಿಸಲಾಗದೆ ಎಲ್ಲವನ್ನು ಸಹಿಸಿಕೊಂಡು ಕಾಲದೂಡುತ್ತಿದ್ದರು. ಕಾಲಕ್ರಮೇಣ ಇವರುಗಳಿಗೆ 'ಶಿಕ್ಷಣ'ವೆಂಬ ಸಂಜೀವಿನಿ ದೊರಕಿದ ತಕ್ಷಣದಿಂದಲೇ ಮಾನವ ವಿರೋಧಿಗಳ ಅತ್ಯಮಾನುಷ ದೌರ್ಜನ್ಯಗಳನ್ನು ಖಂಡಿಸುವ, ಅಕ್ರಮಗಳನ್ನು ಪ್ರಶ್ನಿಸುವ ಕೆಚ್ಚು, ಸಿಟ್ಟು, ಆಕ್ರೋಶಗಳು ಮೊಳಕೆಯೊಡೆದವು. ಮಾತ್ರವಲ್ಲದೆ ಶೋಷಕರ ವಿರುದ್ಧ ಸಂಘಟನಾತ್ಮಕವಾಗಿ ಧೈರ್ಯದಿಂದ ಮುನ್ನುಗ್ಗುವ ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡು ತಮ್ಮ ಹೋರಾಟಕ್ಕೆ ಸಾಂಸ್ಥಿಕ ರೂಪವನ್ನು ಕೊಟ್ಟು ಕ್ರಾಂತಿಯ ಕಹಳೆಯನ್ನು ಮೊಳಗಿಸಿದರು. ಇವರ ಈ ರೀತಿಯ ಕ್ರಾಂತಿ ಕಹಳೆಯ ಕೂಗು ವಿಶ್ವದಾದ್ಯಂತ ಠೇಂಕರಿಸಿತ್ತು. ಈ ರೀತಿ ಸದ್ದು ಮಾಡಿ ಶೋಷಿತರ ಎದೆಯಲ್ಲಿ ನಡುಕ ಹುಟ್ಟಿಸಿದ ಕ್ರಾಂತಿಕಾರಿ ಸಂಘಟನೆಯೇ ಸ್ವರಕ್ಷಣೆ ಮತ್ತು ಸ್ವಾಭಿಮಾನದ ಸಂಕೇತವಾದ ಅಮೇರಿಕಾದ 'ಬ್ಲಾಕ್ ಪ್ಯಾಂಥರ್ಸ್ ಪಾರ್ಟಿ'. ಇದು ಬಿಳಿಯರ ವರ್ಣಬೇಧ ನೀತಿಯ ವಿರುದ್ಧ ಕ್ರಾಂತಿಗೀತೆಯನ್ನು ಮೊಳಗಿಸಿ ನಿಗ್ರೋ ಅಥವಾ ಕಪ್ಪುಜನರ ಅಂಧಕಾರದ ಬಾಳಿಗೆ ಬೆಳಕಾಯಿತು. ಈ ಹಿನ್ನೆಲೆಯಲ್ಲಿ ಈ ಲೇಖನವು ಅಮೇರಿಕಾದಲ್ಲಿ 'ಬ್ಲಾಕ್ ಪ್ಯಾಂಥರ್ಸ್ ಸ್ಥಾಪನೆಯ ಪೂರ್ವದಲ್ಲಿ ಕಪ್ಪುಜನರ ಪಾಡು', 'ಕಪ್ಪುವರ್ಣೀಯರ ಬಾಳಿಗೆ ದಿವ್ಯಸಿಂಚನವಾದ ಶಿಕ್ಷಣ', 'ಬ್ಲಾಕ್ ಪ್ಯಾಂಥರ್ಸ್ ಪಾರ್ಟಿಯ ಉದಯ', 'ಇದರ ಹತ್ತು ಅಂಶಗಳ ಕಾರ್ಯಕ್ರಮಗಳು', ' ಇದರ ಹೋರಾಟದ ಸ್ವರೂಪ' ಹಾಗೂ ಭಾರತದಲ್ಲಿ 'ಭೀಮಸೇನೆ ಮತ್ತು ದಲಿತ್ ಪ್ಯಾಂಥರ್ಸ್‌ಗಳ ವಿಕಾಸದಲ್ಲಿ ಇದರ ಅಸ್ಮಿತೆ'ಗಳನ್ನು ಕುರಿತಾಗಿ ಸವಿವರಗಳನ್ನು ಪ್ರಸ್ತಾಪಿಸಲು ಪ್ರಯತ್ನಿಸಿದೆ.

## ಬ್ಲಾಕ್ ಪ್ಯಾಂಥರ್ಸ್ ಸ್ಥಾಪನೆಯ ಪೂರ್ವದಲ್ಲಿ ಕಪ್ಪುಜನರ ಪಾಡು

ಅಮೇರಿಕಾ ಹಾಗೂ ಆಫ್ರಿಕಾ ಖಂಡಗಳಲ್ಲಿ ಪ್ರಪಂಚದ ಬಹುತೇಕ ಮಂದಿ ನಿಗ್ರೋಗಳು ಅತ್ಯಧಿಕವಾಗಿ ನೆಲೆಸಿದ್ದಾರೆ. ಯೂರೋಪಿನ ಸ್ಪ್ಯಾನಿಸ್, ಫ್ರೆಂಚ್ ಭಾಷೆಗಳಲ್ಲಿ 'ನಿಗ್ರೋ' ಪದಕ್ಕೆ 'ಕಪ್ಪು'ಬಣ್ಣದ ಜನರೆಂದು ಕರೆಯಲಾಗುತ್ತಿತ್ತು [1] ಈ ಬಣ್ಣವು ಗೌರವ, ಸಭ್ಯತೆ, ನಯನಾಜೂಕು, ಸೌಜನ್ಯ ಹಾಗೂ ಆಕ್ರಮಣಶೀಲತೆಗಳ ಸಂಕೇತವಾಗಿತ್ತು [2]. ಇವರ ದೇಹದ ಕಪ್ಪುಬಣ್ಣವು ನಿಸರ್ಗದ ಕೊಡುಗೆಯಾಗಿದೆ. ಇದಕ್ಕೆ ಕಾರಣ ಪ್ರಾಕೃತಿಕ ಹಾಗೂ ಭೌಗೋಳಿಕ ಲಕ್ಷಣಗಳು, ಪರಿಸರದಲ್ಲಿನ ವ್ಯತ್ಯಾಸ, ಏರಿಳಿತ, ವೈಪರೀತ್ಯ, ಭಿನ್ನತೆ, ಹಾಗೂ ವೈಜ್ಞಾನಿಕ ಅಂಶಗಳೇ ಆಗಿವೆ. ಹೀಗಾಗಿ ಈ ಭಾಗಗಳಲ್ಲಿ ವಾಸ ಮಾಡುವ ಬಹುಸಂಖ್ಯಾತ ಕಪ್ಪುಜನರನ್ನು ಪ್ರಾಚೀನ ಕಾಲದಿಂದಲೂ ನಿಗ್ರೋಗಳೆಂದು ಕರೆಯಲಾಗುತ್ತಿತ್ತು.

ಇಲ್ಲಿನ ಅಲ್ಪಸಂಖ್ಯಾತ ಬಿಳಿಯ ಜನಾಂಗಗಳಿಗೆ ಹೋಲಿಸಿದರೆ ಕಪ್ಪುಜನರ ದೈಹಿಕ ದೃಢತೆ, ಆಕಾರ, ಗಾತ್ರ, ದೈಹಿಕ ಲಕ್ಷಣಗಳು, ಜೀವನ ಶೈಲಿ, ದೈನಂದಿನ ಚಟುವಟಿಕೆಗಳು, ನಂಬಿಕೆ, ಆಚರಣೆಗಳ ಸಂಸ್ಕೃತಿಗಳು ವಿಭಿನ್ನವಾಗಿದ್ದವು. ಇವರುಗಳು ಬದುಕಿಗಾಗಿ ತಮ್ಮದೇ ಆದ ನೀತಿನಿಯಮ ಕಟ್ಟಳೆಗಳನ್ನು ವಿಧಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದರು. ಆದರೆ ಅಲ್ಲಿನ ಬಿಳಿಯ ಜನಾಂಗಗಳಿಗೆ ಇವರ ರೀತಿ ರಿವಾಜುಗಳು ಹಿಡಿಸದೆ ಹೋಗಿದ್ದವು. ಕಪ್ಪುಜನರು ಕೂಡ ನಮ್ಮಂತೆಯೇ ಮನುಷ್ಯರು, ಅವರಿಗೂ ಮಾನವ ಸಮಾಜದಲ್ಲಿ ಬದುಕುವ ಹಾಗೂ ಸೌಲಭ್ಯ ಸವಲತ್ತುಗಳನ್ನು ಅನುಭವಿಸುವ ಹಕ್ಕಿದೆ ಎಂಬುದನ್ನು ಮರೆತ ಅಲ್ಪಸಂಖ್ಯಾತ ಬಿಳಿಯ ಜನರು ತಮ್ಮನ್ನು ತಾವು ಶ್ರೇಷ್ಠ ಜನಾಂಗವೆಂದು ನಿರ್ಧರಿಸಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಕಪ್ಪುವರ್ಣದವರಿಗೆ ಶೋಷಕರಾಗಿ ಮಾನವೀಯ ಮೌಲ್ಯಗಳನ್ನು ಮೂಲೆಗುಂಪಾಗಿಸಿ ಶೋಷಿಸತೊಡಗಿದರು.

ಬಿಳಿಯ ಜನಾಂಗಗಳು ತಮ್ಮ ಅಕ್ರಮ, ಅನ್ಯಾಯ, ಜನಾಂಗೀಯ ದ್ವೇಷ ಮತ್ತು ತಾರತಮ್ಯ, ವರ್ಣಬೇಧ ನೀತಿಗಳಿಂದ ಕಪ್ಪುಜನಗಳನ್ನು ಗುಲಾಮರನ್ನಾಗಿಸಿಕೊಂಡು ನೀಡುತ್ತಿದ್ದ ಮಾನಸಿಕ ಮತ್ತು ದೈಹಿಕ ಕಿರುಕುಳಗಳು, ಅತ್ಯಾಚಾರ, ಕೊಲೆಗಳಂತಹ ಕಷ್ಟಕೋಟಲೆಗಳಿಂದಾಗಿ ಕಪ್ಪುಜನಗಳ ಆಕ್ರಂದನ ಮುಗಿಲುಮುಟ್ಟಿತ್ತು. ಮಾತ್ರವಲ್ಲದೆ ಬಿಳಿಯ ಜನಾಂಗಗಳು ತಮ್ಮದೇ ಆದ ಆಡಳಿತ ಸರ್ಕಾರವನ್ನು ರಚಿಸಿಕೊಂಡು ಇದರಿಂದ ಸಾರ್ವಜನಿಕವಾಗಿ ಸಿಗಬೇಕಿದ್ದ ಎಲ್ಲಾ ರೀತಿಯ ಮೂಲಸೌಕರ್ಯಗಳನ್ನು ಕಪ್ಪುವರ್ಣೀಯರಿಗೆ ವಂಚಿಸಿದ್ದರು [3] ಅವುಗಳನ್ನು ಕೆಳಗಿನ ಅಂಶಗಳ ಆಧಾರದ ಮೇಲೆ ತಿಳಿದುಕೊಳ್ಳಬಹುದು.

1. ಕಪ್ಪುಸಮುದಾಯದವರು ಸಮಾಜದಲ್ಲಿ ಬಿಳಿಯ ಜನಾಂಗದವರಂತೆ ಸ್ವತಂತ್ರವಾಗಿ ಬದುಕುವ ಹಕ್ಕನ್ನು ಕಸಿದುಕೊಳ್ಳಲಾಗಿತ್ತು.
2. ಕಪ್ಪುಜನಗಳಿಗೆ ಸರ್ಕಾರದ ಸಾರ್ವಜನಿಕ ಉದ್ಯೋಗವಕಾಶಗಳಿಂದ ವಂಚಿಸಿದ್ದರು.
3. ಶ್ರೀಮಂತ ಜನಾಂಗೀಯ ದ್ವೇಷಿಗಳಿಂದ ಕಪ್ಪುವರ್ಣೀಯರುಗಳ ಮೇಲೆ ಆರ್ಥಿಕ ದಬ್ಬಾಳಿಕೆ ನಿರಂತರವಾಗಿ ನಡೆಯುತ್ತಲೇ ಇತ್ತು.
4. ಬಿಳಿಯ ಜನಾಂಗಗಳಿಂದ ಕಪ್ಪುಜನರ ಆಸ್ತಿ, ನಗನಾಣ್ಯ, ಸಂಪತ್ತುಗಳ ದರೋಡೆಯಾಗುತ್ತಿತ್ತು.
5. ಬಹುತೇಕವಾಗಿ ಬಡತನದ ಬೇಗೆಯಲ್ಲಿ ಸುಟ್ಟುಕರಕಲಾಗಿದ್ದ ಬಡಕಪ್ಪುಜನರನ್ನು ಬಿಳಿಯರು ಗುಲಾಮರನ್ನಾಗಿಸಿಕೊಂಡು ಅವರಿಗೆ ತಮ್ಮ ಇಡೀ ಜೀವನಪೂರ್ತ ಜೀತ ಮಾಡಿಕೊಂಡು ಸಾಯುವಂತೆ ಮಾಡಿದ್ದರು.
6. ಬಿಳಿಯರು ಕಪ್ಪುವರ್ಣೀಯರ ಬಳಿ ಅಲ್ಪಸ್ವಲ್ಪ ಇದ್ದ ಕೃಷಿ ಜಮೀನುಗಳನ್ನು ಅಕ್ರಮವಾಗಿ ಕಸಿದುಕೊಂಡಿದ್ದರಲ್ಲದೆ, ಅವರಿಗೆ ತಿನ್ನಲು ಗತಿಯಿಲ್ಲದಂತೆ ಮಾಡಿದ್ದರು.
7. ಅಲ್ಲದೆ ಕಪ್ಪುಜನರಿಗೆ ಪ್ರಾಥಮಿಕ ಶಿಕ್ಷಣವೂ ಸಿಗದಂತೆ ಮಾಡಿ ಅನಕ್ಷರತೆಯ ಕೂಪಕ್ಕೆ ತಳ್ಳಿದ್ದರು.
8. ಕಪ್ಪು ಸಮುದಾಯಗಳಿಗೆ ಒಂದು ಕಡೆ ಶಾಶ್ವತವಾಗಿ ನೆಲೆ ನಿಂತು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡದೆ, ಅವರುಗಳು ವಸತಿರಹಿತವಾಗಿ ರೋಗರುಜಿನಗಳ ಆವಾಸಸ್ಥಾನವಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವಂತೆ ಮಾಡಿದ್ದರು.
9. ಜೊತೆಗೆ ಹಲವಾರು ಕಪ್ಪು ಕುಟುಂಬಗಳು ಸ್ವಂತ ಸೂರಿಲ್ಲದೆ ರಸ್ತೆಯ ಬದಿಯಲ್ಲಿ ಅನಾಥ ಜೀವನವನ್ನು ನಡೆಸುವಂತೆ ಮಾಡಿದ್ದರು.
10. ಅಲ್ಲಿ ಆಳುವ ಸರ್ಕಾರ ಕೂಡ ಜನಾಂಗೀಯ ತಾರತಮ್ಯ ಮಾಡುತ್ತಿದ್ದ ಬಿಳಿಯರ ಪರವಾಗಿದ್ದು ಕಪ್ಪುವರ್ಣೀಯರ ಮೇಲೆ ಪೊಲೀಸ್ ಪಡೆಯನ್ನು ಬಿಟ್ಟು ದೈಹಿಕವಾಗಿ ಹಲ್ಲೆ, ಕೊಲೆಗಳನ್ನು ಮಾಡುವಂತೆ ಪ್ರೇರೇಪಿಸುತ್ತಿತ್ತು.
11. ಕಪ್ಪುಜನಗಳು ಬಿಳಿಯರ ಸರ್ಕಾರದಿಂದ ಎಲ್ಲಾ ಕ್ಷೇತ್ರಗಳಲ್ಲೂ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಗಾಗಿ ಸ್ವರಕ್ಷಣೆ ಮಾಡಿಕೊಳ್ಳಲಾಗದೆ ಸಾಯುವಂತಾ ದುಸ್ಥಿತಿ ಎದುರಿಸುತ್ತಿದ್ದರು.
12. ಬಿಳಿಯರು ಇವರಿಗೆ ನಾಗರಿಕತ್ವದ ಹಕ್ಕನ್ನು ಕಸಿದುಕೊಂಡಿದ್ದರು.
13. ಕಪ್ಪು ಜನಾಂಗದ ನಾಗರಿಕರು ಮತ್ತು ಅವರ ಮಕ್ಕಳು ತಿನ್ನಲು ಒಪ್ಪತ್ತಿನ ಊಟಕ್ಕೂ ಗತಿಯಿಲ್ಲದೆ, ಉಡಲು ಬಟ್ಟೆಗಳಿಲ್ಲದೆ, ಸಾಮಾಜಿಕ ನ್ಯಾಯ ಮತ್ತು ಶಾಂತಿಯ ಭದ್ರತೆ ಇಲ್ಲದಂತಾಗಿ ನರಕ ಸದೃಶ ಜೀವನವನ್ನು ನಡೆಸುತ್ತಿದ್ದರು [4].

ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ತಾಳ್ಮೆ, ಸಹನೆಯನ್ನು ಕಳೆದುಕೊಂಡು ರೋಷಾವೇಶಗಳಿಂದ ಜರ್ಜರಿತರಾದ ಕಪ್ಪುವರ್ಣೀಯರುಗಳು ಬಿಳಿಯ ಜನಾಂಗದ ಶೋಷಣೆಗಳ ವಿರುದ್ಧ ದಂಗೆ ಎದ್ದರು. ತಮ್ಮ ಆಕ್ರಮಣಕಾರಿತನದಿಂದ ಬಿಳಿಯ ಜನಾಂಗದ ದಬ್ಬಾಳಿಕೆಗಾರರ ಕೊಲೆ, ಭೀಕರ ಹಲ್ಲೆ, ಮುಗ್ಧ ಹೆಣ್ಣು ಮಕ್ಕಳು ಹಾಗೂ ಮಹಿಳೆಯರ ಮೇಲೆ ಗುಂಪು ಅತ್ಯಾಚಾರ, ಸರಣಿ ಮಾನಭಂಗ ಮತ್ತು ಕೊಲೆ, ದರೋಡೆ, ಆಸ್ತಿಪಾಸ್ತಿಗಳ ಭಗ್ನಗೊಳಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಉದಾಹರಣೆಗೆ: ಅಮೇರಿಕಾದ ಬಿಳಿಯ ಮಹಿಳೆಯ ಮೇಲೆ ಅತ್ಯಾಚಾರ ಮತ್ತು ಅಮಾನುಷ ಕೊಲೆ (28 ಮೇ 1901), ನಿಗ್ರೋ ಪುರುಷರಿಂದ ದುಷ್ಕೃತ್ಯ–ಆರು ಮಂದಿ ಅಮೇರಿಕಾದ ಬಿಳಿಯ ಪುರುಷರ ಕೊಚ್ಚಿ ಕೊಲೆ (7 ಏಪ್ರಿಲ್, 1902) ಮುಂತಾದವುಗಳು ಪ್ರಮುಖವಾದವುಗಳು [5]. ಇಂತಹ ಸಂದರ್ಭದಲ್ಲಿ ಕರುಣೆರಹಿತ ಸೂಕ್ತ ಕಾನೂನುಕ್ರಮಗಳನ್ನು ಕೈಗೊಂಡ ಬಿಳಿಯರ ಅಮೇರಿಕಾ ಸರ್ಕಾರ ಪೊಲೀಸ್ ಪಡೆಯನ್ನು ನೇಮಿಸಿ ಬಹಿರಂಗವಾಗಿಯೇ ಅಪರಾಧಿ ಕಪ್ಪುವರ್ಣೀಯರ ಮಾರಣಹೋಮವನ್ನು ಮಾಡಿಸಿತು. ಅಲ್ಲದೆ ಸೆರೆಸಿಕ್ಕ ಕಪ್ಪು ಅಪರಾಧಿಗಳನ್ನು ಗಲ್ಲಿಗೇರಿಸಲು ಪ್ರಾರಂಭಿಸಿದರು. ಬಿಳಿಯರ ಪ್ರಚೋದನೆಗಳಿಂದ ಈ ಕೃತ್ಯಗಳಿಗೆ ಮುಂದಾದ ಮುಗ್ಧ ಕಪ್ಪುವರ್ಣೀಯರ ಈ ದುಸ್ಥಿತಿಯನ್ನು ಕಂಡು ಮರುಗಿ ದಿಕ್ಕೇ ತೋಚದಂತಾಗಿದ್ದ ಅನಕ್ಷರಸ್ಥ ಕಪ್ಪುಜನಗಳ ಬಾಳಿಗೆ ಇದೇ ಕಪ್ಪು ಜನಾಂಗದ ಕೆಲವು ಮಾದರಿ ನಾಯಕರ ತ್ಯಾಗದಿಂದ 'ಶಿಕ್ಷಣ'ವೆಂಬ 'ಅಕ್ಷರ ಜ್ಯೋತಿ' ಪ್ರಜ್ವಲಿಸಿತು.

- **ಕಪ್ಪುವರ್ಣೀಯರ ಬಾಳಿಗೆ ದಿವ್ಯಸಿಂಚನವಾದ ಶಿಕ್ಷಣ**

ಮಾನವತೆಯ ಮತ್ತು ಸಮಾನತೆಯ ವಿರೋಧಿ ಭಾವನೆಯನ್ನು ಹೊಂದಿರುವ ದಬ್ಬಾಳಿಕೆಗಾರ ದೌರ್ಜನ್ಯಗಳಿಗೊಳಗಾದ ಯಾವುದೇ ವರ್ಣಗಳಾಗಲಿ, ಜಾತಿಗಳಾಗಲಿ, ವರ್ಗಗಳಾಗಲಿ ಅಥವಾ ಸಮುದಾಯಗಳಾಗಲಿ ತಮ್ಮ ಅವಕಾಶ ವಂಚಿತ ಹಕ್ಕುಗಳನ್ನು ಧೈರ್ಯವಾಗಿ ಆತ್ಮಸ್ಥೈರ್ಯದಿಂದ ಪ್ರಶ್ನಿಸುವುದರ ಮೂಲಕ ಆರ್ಭಟಿಸಿ ಪಡೆದುಕೊಳ್ಳಬೇಕಾದರೆ 'ಶಿಕ್ಷಣ' ಎಂಬ 'ಹುಲಿಯ ಹಾಲ'ನ್ನು ಕುಡಿಯಲೇಬೇಕಾಗುತ್ತದೆ. ಇದನ್ನು ಕುಡಿದವರು ಜೀವನದಲ್ಲಿ ಎಂತಹ ಕಷ್ಟಗಳು ಬಂದರೂ ಎದುರಿಸಿ ಗೆಲ್ಲುವ ತಾಕತ್ತನ್ನು ಹೊಂದುತ್ತಾರೆ ಎಂದೇಳಬಹುದು. ಇದಕ್ಕೆ ಪುಷ್ಠಿ ನೀಡುವಂತೆ ಒಂದು ಕವಿತೆ ಇದೆ.

'ವಿದ್ಯೆಯಿಲ್ಲದೆ ಬುದ್ಧಿಯಿಲ್ಲ
ಬುದ್ಧಿಯಿಲ್ಲದೆ ಕ್ರಿಯಾಶೀಲತೆಯಿಲ್ಲ
ಅಭಿವೃದ್ಧಿ ಇಲ್ಲದ ಜೀವನ ವ್ಯರ್ಥ
ಶಿಕ್ಷಣವೇ ಬದುಕಿನ ಮಾರ್ಗ
ಶಿಕ್ಷಣದಿಂದಲೇ ಮನುಷ್ಯತ್ವ
ಮೂರ್ಖತನಕ್ಕೆ ಶಿಕ್ಷಣವೇ ಮದ್ದು' [6]

ಎಂಬಂತೆ ಕಪ್ಪುಜನಾಂಗಕ್ಕೆ ಸವರ್ಣೀಯ ಬಿಳಿಯ ಜನಾಂಗದ ಶೋಷಣೆಗಳನ್ನು ಮೆಟ್ಟಿ ನಿಲ್ಲುವ ಅಬ್ಬರದ ಧೈರ್ಯವನ್ನು ಶಿಕ್ಷಣ ನೀಡಿತು. ಹೀಗಾಗಿ ಕಪ್ಪುವರ್ಣೀಯರ ಬದುಕಿಗೆ ಶಿಕ್ಷಣದ ದಿವ್ಯಪ್ರಭೆಯ ಹೊನಲನ್ನು ಹರಿಸಿದ ರೂವಾರಿಗಳಾಗಿ ಅಬ್ರಹಾಂ ಲಿಂಕನ್ (1809–1865), ಬೂಕರ್ ಟಿ. ವಾಷಿಂಗ್ಟನ್ (1856–1915), ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್(1929–1968)ರವರು ಮೂರ್ತಗೊಂಡರು. ಇವರುಗಳು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ, ಸಮಾಜವಾದ, ಸಮತಾವಾದವನ್ನು ಪ್ರತಿಪಾದಿಸಿ, ಕಪ್ಪುಜನಾಂಗಗಳ ಮನಮುಟ್ಟುವಂತೆ ಮಾಡಿದರು. ಜೊತೆಗೆ 19ಮತ್ತು20ನೇ ಶತಮಾನದಲ್ಲಿ ಕಪ್ಪುವರ್ಣೀಯರಿಗೆ ಶಾಲಾಕಾಲೇಜುಗಳನ್ನು ತೆರೆದು ಅಕ್ಷರಜ್ಯೋತಿಯ ಬೀಜವನ್ನು ಬಿತ್ತಿ ಬಿಳಿಯರ ದಬ್ಬಾಳಿಕೆಯನ್ನು ಪ್ರಶ್ನಿಸಿ ತಮ್ಮ ಹಕ್ಕನ್ನು ಪಡೆಯುವ ಹೋರಾಟದ ಸ್ಥೈರ್ಯವನ್ನು ತುಂಬಿದರು [7].

ಅದರಲ್ಲೂ 1955ರ ಸಮಯದಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ರವರು ಗಾಂಧೀಜಿಯವರ ಅದರಲ್ಲೂ ಅಹಿಂಸಾತ್ಮಕ ಸತ್ಯಾಗ್ರಹ ಚಳವಳಿಯಿಂದ ಪ್ರೇರಿತರಾಗಿ ಅಮೇರಿಕಾದ ಆಲ್ಬಾಮ ರಾಜ್ಯದ ಮೊಸೋಟೋಗೊಮರಿಯಲ್ಲಿ 'ನಾನ್ ವೈಲೆನ್ಸ್ ಬ್ಲಾಕ್ ಮೂವ್‌ಮೆಂಟ್'ನ್ನು ಪ್ರಾರಂಭಿಸಿದರು.8 ಇದಕ್ಕೆ ರೇ, ಅಬರ್ನಥಿ ಹಾಗೂ ಬಿಳಿಯರ ಬೆಂಬಲ ಕೂಡ ಇತ್ತು. ಮುಂದೆ ಡ್ಯೂಬಿಯಸ್, ಮಾರ್ಕಸ್ ಗಾರ್ವೆ, 10ನೇ ಮಾಲ್ಕಮ್‌ರವರು ಕಪ್ಪುಜನರಲ್ಲಿ 'ಬ್ಲ್ಯಾಕ್ ಲಿಟ್ರೇಚರ್'(ಕಪ್ಪು ಸಾಹಿತ್ಯ) ಮೂಲಕ ಕಪ್ಪು ಸಮುದಾಯಗಳಲ್ಲಿ 'ನೆಗ್ರಿಟ್ಯೂಡ್' (ಕಪ್ಪುಪ್ರಜ್ಞೆ)ನ್ನು ಬೆಳೆಸಿ, ಸ್ವ-ಗೌರವ, ಸ್ವಾಭಿಮಾನದ ಆತ್ಮರಕ್ಷಣೆಯನ್ನು ಬೆಳೆಸಿದರು 'ಒಂದು ಕೈಯಲ್ಲಿ ಪೆನ್ನು, ಇನ್ನೊಂದು ಕೈಯಲ್ಲಿ ಬಂದೂಕು ಹಿಡಿದು ಕವಿಗಳಾಗಿಯೂ, ಕಲಿಗಳಾಗಿಯೂ ಹೋರಾಟ ನಡೆಸುವ ನೈತಿಕ ಧೈರ್ಯವನ್ನು ತುಂಬಿದರು [8]. ಇದರಿಂದಾಗಿ ವಿದ್ಯಾರ್ಥಿಗಳಾಗಿದ್ದ ಬೆಂಜಿಮಿನ್ ಮೊಲಾಯಿಸ್, ನಿಕೋಲಸ್ ಗ್ಯೂಲನ್, ಏರಿಯಲ್ ಡಾರ್ವ್ಲನ್, ಚಿನುವಾ ಅಚಿಬೆ, ಡೆನಿಸ್ ಬ್ರೂಟಸ್, ವೋಲೆಸೋಯಂಕಾ, ರಸೆಲ್ ಹ್ಯಾಮಿಲ್ಟನ್ ಮುಂತಾದವರು ಸಂಘಟನಾತ್ಮಕ ಕ್ರಾಂತಿಕಾರಿ ಮನೋಭಾವವನ್ನು ಬೆಳೆಸಿಕೊಂಡರು [9]. ಜೊತೆಗೆ ನಿರಂಕುಶ ಪ್ರಭುತ್ವವನ್ನು ಹೊಂದಿದ್ದ ರಷ್ಯಾದ ಝಾರ್ ದೊರೆಗಳ ವಿರುದ್ಧ 'ಭೂಮಿ, ಆಹಾರ ಮತ್ತು ಶಾಂತಿ' ಘೋಷಣೆಯ ಮೂಲಕ ಕ್ರಾಂತಿ ಸಾರಿದ ಲಿಕೋನಾಯ್ ಲೆನಿನ್, ಲೆನಿನ್ ಈ ಕ್ರಾಂತಿಗೆ ಪ್ರೇರಣಾಯುತ ಬರವಣಿಗೆ ನೀಡಿದ ಕಾರ್ಲ್‌ಮಾರ್ಕ್ ಹಾಗೂ ಚೀನಾದಲ್ಲಿ ಸರ್ವಾಧಿಕಾರಿ ಧೋರಣೆಯನ್ನು ಹೊಂದಿದ್ದ ಚಿಯಾಂಗ್ ಕೈ ಷೇಕ್ ವಿರುದ್ಧ ಜನತಾ ಗಣರಾಜ್ಯಕ್ಕಾಗಿ ಕ್ರಾಂತಿ ಕೈಗೊಂಡು ಯಶಸ್ವಿಯಾದ ಮಾವೋತ್ಸೆತುಂಗ್‌ರವರುಗಳ ಪ್ರಭಾವ ಕೂಡ ವಿದ್ಯಾವಂತ ಕಪ್ಪು ವಿದ್ಯಾರ್ಥಿ ಬಳಗಕ್ಕೆ ತಿಳಿದಿತ್ತು [10]. ಇವರ ಸ್ಫೂರ್ತಿ ಮತ್ತು ಪ್ರಚೋದಿಸಿದ ಶಿಕ್ಷಣದ ಪ್ರಭಾವ 20ನೇ ಶತಮಾನದ ಮಧ್ಯಭಾಗದಲ್ಲಿ ಮೂರ್ತಗೊಂಡ ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯ ಮೇಲೂ ಆವರಿಸಿತು. ಇದರಿಂದ ಪ್ರಜ್ಞಾವಂತರಾದ ಕಪ್ಪು ಜನಾಂಗಗಳು ಸುಶಿಕ್ಷಿತರಾಗಿ ತಮಗೆ ಬಹುಕಾಲದಿಂದಲೂ ಮೋಸ ಮಾಡಿ ವಂಚಿಸಿದ್ದ ಹಕ್ಕುಗಳನ್ನು ಆಕ್ರಮಣಕಾರಿ ಕ್ರಾಂತಿಯ ಮೂಲಕ ಕೇಳಿ ಪಡೆದುಕೊಳ್ಳಲು ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯ ಮೂಲಕ ಮುಂದಾದರು.

**ಬ್ಲಾಕ್ ಪ್ಯಾಂಥರ್ಸ್ ಪಾರ್ಟಿಯ ಉದಯ**

ಕಪ್ಪುವರ್ಣೀಯರ ಸಬಲೀಕರಣಕ್ಕಾಗಿ ಬೂಕರ್ ಟಿ. ವಾಷಿಂಗ್ಟನ್, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ರೇ, ಅಬರ್ನತಿ ಮುಂತಾದವರು ಗಾಂಧೀಜಿಯವರ ಅಹಿಂಸಾತ್ಮಕ ತತ್ವವನ್ನು ಹಾಗೂ ಪ್ರಜಾಪ್ರಭುತ್ವ ಮಾದರಿಯ ಪ್ರತಿಭಟನೆ ಮಾಡುತ್ತಿದ್ದರು. ಹಾಗೆಯೇ ಮಾರ್ಕಸ್ ಗಾರ್ವೆ, ಡ್ಯೂಬಿಯಸ್, ಹತ್ತನೇ ಮಾಲ್ಕಂ ಮುಂತಾದವರು ಹಿಂಸಾತ್ಮಕ ಹೋರಾಟಗಳ ತತ್ವ ಮತ್ತು ಚಿಂತನೆಗಳಿಂದ ಬಿಳಿಯರ ವಿರುದ್ಧ ಚಳವಳಿಯನ್ನು ಮಾಡುತ್ತಿದ್ದರು. ಇವರಿಬ್ಬರ ಹೋರಾಟಗಳಿಂದ ಪ್ರಭಾವಿತರಾದ ಹ್ಯೂ ಪರ್ಸಿ ನ್ಯೂಟನ್ ಹಾಗೂ ಬಾಬ್ಬಿ ಸೀಲೆ ಎಂಬ ಸುಶಿಕ್ಷಿತ ಕಪ್ಪುವರ್ಣೀಯ ಯುವ ವಿದ್ಯಾರ್ಥಿಗಳು 15 ಅಕ್ಟೋಬರ್, 1966ರಂದು ಅಮೇರಿಕಾದ ಕ್ಯಾಲಿಫೋರ್ನಿಯಾದ ಆಕ್ಲೆಂಡ್ ಎಂಬಲ್ಲಿ 'ಸ್ವರಕ್ಷಣೆಗಾಗಿ ಬ್ಲಾಕ್ ಪ್ಯಾಂಥರ್ ಪಾರ್ಟಿ' ಕ್ರಾಂತಿಕಾರಿ ಸಂಘಟನೆಯನ್ನು ಸ್ಥಾಪಿಸಿದರು [11]. ಈ ಸಂದರ್ಭದಲ್ಲಿ ಇವರ ಜೊತೆ ಎಲ್ಬರ್ಟ್ ಹೊವಾರ್ಡ್, ಶರ್ಮನ್ ಫೋರ್ಟೆ, ರೆಗ್ಗೀ ಫೋರ್ಟೆ, ಬಾಬ್ಬಿ ಹಟನ್ ಎಂಬ ಕಪ್ಪು ವಿದ್ಯಾರ್ಥಿ ನಾಯಕರು ಕೂಡ ಪ್ರಮುಖ ಪಾತ್ರ ವಹಿಸಿದ್ದರು [12]. ಎಡ್ರಿಡ್ಜ್ ಕ್ಲೆವರ್, ಹೆಚ್. ರಾಪ್ ಬ್ರೌನ್, ಸ್ಟೋರ್ಕಲೇ ಕಾರ್ಮಿಚಲ್‌ರವರುಗಳು ಈ ಪಾರ್ಟಿಯ ಪ್ರಧಾನ ಮುಂದಾಳುಗಳಾಗಿದ್ದರು. ಇವರೆಲ್ಲರೂ ಕಾಲೇಜೊಂದರ 'ಅಹಿಂಸಾತ್ಮಕ ಸಹಕಾರ ವಿದ್ಯಾರ್ಥಿ ಸಮಿತಿ' (ಸ್ಟೂಡೆಂಟ್ ನಾನ್ ವೈಲೆಂಟ್ ಕೋ-ಆರ್ಡಿನೇಟಿಂಗ್ ಕಮಿಟಿ)ಯ ಪದಾಧಿಕಾರಿಗಳಾಗಿದ್ದರು.

ಇವರುಗಳು ಉತ್ತಮ ಬರಹಗಾರರು, ಕವಿಗಳು ಹಾಗೂ ಕಲಾವಿದರುಗಳಾಗಿದ್ದುಕೊಂಡು, ಪಾರ್ಟಿಯಲ್ಲಿ ಗೌರವಾನ್ವಿತ ಜವಾಬ್ದಾರಿಗಳನ್ನು ಹೊಂದಿದ್ದರು. ಸ್ಟೋರ್ಕಲೇ ಕಾರ್ಮಿಚಲ್ ಪ್ರಧಾನ ಮಂತ್ರಿಯಾಗಿ, ಹ್ಯೂ ಪರ್ಸಿ ನ್ಯೂಟನ್ ಪಾರ್ಟಿಯ ರಕ್ಷಣಾ ಮಂತ್ರಿಯಾಗಿ, ಎಡ್ರಿಡ್ಜ್ ಕ್ಲೆವರ್ ಮಾಹಿತಿ ಸಚಿವರಾಗಿ ಇನ್ನಿತರರು ಬೇರೆಬೇರೆ ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಪಾರ್ಟಿಯ ಚಿಹ್ನೆ 'ಕಪ್ಪು ಚಿರತೆಯ ಗುರುತು' ಆಗಿತ್ತು. ಇದನ್ನು ಕುರಿತಾಗಿ ಹ್ಯೂ ಪರ್ಸಿ ನ್ಯೂಟನ್ ಹೇಳಿರುವಂತೆ 'ನಾವುಗಳು ಚಿರತೆಯ ರೀತಿ ಆಕ್ರಮಣಕಾರಿ ಸ್ವಭಾವವನ್ನು ಹೊಂದಿದ್ದು ಅನಗತ್ಯವಾಗಿ ಯಾರ ಮೇಲೂ ದಾಳಿ ಮಾಡುವುದಿಲ್ಲ. ಆದರೆ ಯಾರಾದರೂ ಕ್ಷುಲ್ಲಕ ಕಾರಣಗಳಿಗಾಗಿ ನಮ್ಮ ಮೇಲೆ ದೌರ್ಜನ್ಯ ಮಾಡಲು ಮುಂದಾದರೆ ಅಂತವರನ್ನು ಸುಮ್ಮನೆ ಬಿಡದೆ ಚಿರತೆಯಂತೆ ಆಕ್ರಮಣ ಮಾಡಿ ಘಾಸಿಗೊಳಿಸುತ್ತೇವೆ' ಎಂದು ಸಂಘಟನೆಯ ಧ್ಯೇಯವನ್ನು ತಿಳಿಸಿದ್ದರು [13]. ಒಟ್ಟಾರೆ ಈ ಪಾರ್ಟಿಯ ಮುಖ್ಯ ಉದ್ದೇಶ ವರ್ಣಾಧರಿತ ಜನಾಂಗೀಯ ತಾರತಮ್ಯವನ್ನು ಮೂಲೋತ್ಪಾಟನೆ ಮಾಡಿ ಕಪ್ಪುವರ್ಣೀಯರ ಮೇಲೆ ಪೊಲೀಸರ ಅಮಾನುಷ ಕೃತ್ಯಗಳನ್ನು ನಿಲ್ಲಿಸುವುದೇ ಆಗಿತ್ತು [14].

ಹೀಗಾಗಿ ಕ್ರಾಂತಿಕಾರಿ ಬ್ಲಾಕ್ ಪ್ಯಾಂಥರ್ಸ್ ಸ್ಥಾಪಿತವಾದ ಮೂರು ವರ್ಷಗಳಲ್ಲೇ ಕಪ್ಪುಜನಾಂಗದ ಮೇಲೆ ಹೊಂದಿದ್ದ ಸಂವೇದನಾಯುಕ್ತ ಕಾಳಜಿ, ಕಳಕಳಿಯಿಂದಾಗಿ ಇದರ ಪ್ರಸಿದ್ಧತೆ ಅಮೇರಿಕದಾದ್ಯಂತ ಹರಡಿತು. ಜೊತೆಗೆ ಇದರ ಶಾಖೆಗಳು ಕೂಡ ವಿಸ್ತಾರಗೊಂಡವು. ಉದಾಹರಣೆಗೆ ಅಮೇರಿಕಾದ ಬಾಲ್ಟಿಮೋರ್, ಚಿಕಾಗೋ, ಕ್ಲೆವೆಲ್ಯಾಂಡ್, ಲಾಸ್‌ಏಂಜಲೀಸ್, ಸ್ಯಾನ್‌ಡಿಯೊಗೋ, ಡೆನ್ವರ್, ಡೆಟ್ರಾಯ್ಟ್, ಕನ್ಸಾಸ್ ಸಿಟಿ, ಡಲ್ಲಾಸ್, ನ್ಯೂ ಒರಿಲಿನ್ಸ್, ನೆವರ್ಕ್, ನ್ಯೂಯಾರ್ಕ್, ಬೋಸ್ಟನ್, ಫಿಲಿಡೆಲ್ಫಿಯಾ, ಪಿಟ್ಸ್‌ಬರ್ಗ್, ಸಿಟಲ್, ಸ್ಯಾನ್ ಫ್ರಾನ್ಸಿಸ್ಕೋ, ವಾಷಿಂಗ್ಟನ್ ಡಿ.ಸಿ, ಆಫ್ರಿಕನ್ ದೇಶಗಳು ಹಾಗೂ ಮುಂತಾದ ಸ್ಥಳಗಳು ಪ್ರಮುಖವಾದವುಗಳು. ಮಾತ್ರವಲ್ಲದೆ ಈ ಪಾರ್ಟಿಯನ್ನು ಸೇರುವ ಸದಸ್ಯರ ಸಂಖ್ಯೆಯೂ ಕೂಡ ಗಣನೀಯವಾಗಿ ಏರಿಕೆಯಾಗಿ 10000 ಮಂದಿಗಿಂತ ಹೆಚ್ಚು ಸದಸ್ಯರನ್ನು ಹೊಂದಿತ್ತು. ಜೊತೆಗೆ ಇದು 'ದಿ ಬ್ಲಾಕ್ ಪ್ಯಾಂಥರ್' ಎಂಬ ವಾರ್ತಾ ಪತ್ರಿಕೆಯನ್ನು ಮುದ್ರಣ ಮಾಡುತ್ತಿದ್ದರಿಂದ ಇದನ್ನು

ಬಹಳ ಕುತೂಹಲಕಾರಿಯಾಗಿ ಓದುವವರ ಸಂಖ್ಯೆಯೂ 2,50000 ಲಕ್ಷವನ್ನು ಮೀರಿತ್ತು [15].

ಬ್ಲಾಕ್ ಪ್ಯಾಂಥರ್ಸ್ ಪಾರ್ಟಿಯ ವಿಶೇಷತೆ ಎಂದರೆ ಇದರ ಸದಸ್ಯರು, ಪದಾಧಿಕಾರಿಗಳ ಕ್ರಾಂತಿಕಾರತ್ವವನ್ನು ಸಂಕೇತಿಸುವ ಸಮವಸ್ತ್ರಗಳು. ನೀಲಿ ಅಂಗಿಗಳು, ಕಪ್ಪು ಷರಾಯಿ (ಪ್ಯಾಂಟ್), ಕಪ್ಪು ಚರ್ಮದ ಮೇಲಂಗಿ, ಕಪ್ಪು ನಡುಪಟ್ಟಿ ಹಾಗೂ ಸಣ್ಣ ಬಂದೂಕು ಇವುಗಳಲ್ಲಿ ಪ್ರಮುಖವಾದವುಗಳಾಗಿದ್ದವು. ಈ ಸಮವಸ್ತ್ರಗಳನ್ನು ಹ್ಯೂ ಪರ್ಸಿ ನ್ಯೂಟನ್‌ನ ಸಹೋದರ ಮೆಲ್ವಿನ್‌ನು ಪರಿಚಯಿಸಿದ್ದನು [16]. ಹೀಗಾಗಿ ಬ್ಲಾಕ್ ಪ್ಯಾಂಥರ್ಸ್‌ನ ಕ್ರಾಂತಿಕಾರಿ ಪಡೆಯ ಶಿಸ್ತು ಮತ್ತು ಆಕ್ರಮಣಕಾರಿ ನೀತಿಯನ್ನು ಕಂಡು ಯಾರು ಕೂಡ ಕಪ್ಪು ಜನರ ಮೇಲೆ ದೌರ್ಜನ್ಯವೆಸಗಲು ಪ್ರಯತ್ನಿಸುತ್ತಿರಲಿಲ್ಲ. ಜೊತೆಗೆ ಪಾರ್ಟಿಯು ತನ್ನ ಹೋರಾಟದ ಕ್ಷಿಪಣಿಗಳನ್ನಾಗಿ 'ಸ್ಟೂಡೆಂಟ್ ನಾನ್ ವೈಲೆಂಟ್ ಕೋ–ಆರ್ಡಿನೇಟಿಂಗ್ ಕಮಿಟಿ'[8]. (ಎಸ್.ಎನ್.ಸಿ.ಸಿ.) ಎಂಬ ವಿದ್ಯಾರ್ಥಿ ಸಂಘಟನೆಯನ್ನು ಸ್ಥಾಪಿಸಿಕೊಂಡಿತ್ತು.

ಈ ಸಂದರ್ಭದಲ್ಲಿ ಬ್ಲಾಕ್ ಪ್ಯಾಂಥರ್ಸ್ ತನ್ನ ಪ್ರಣಾಳಿಕೆಯಲ್ಲಿ 'ಹತ್ತು ಅಂಶಗಳ ಕಾರ್ಯಕ್ರಮ'ಗಳನ್ನು ತಮ್ಮ ಬೇಡಿಕೆಗಳ ರೂಪದಲ್ಲಿ ಸರ್ಕಾರದ ಮುಂದಿಟ್ಟು ಅವುಗಳನ್ನು ಕಾರ್ಯರೂಪಕ್ಕೆ ತರಲು ಹೋರಾಟಗಳನ್ನು ಆರಂಭಿಸಿತು.

**ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯ ಹತ್ತು ಅಂಶಗಳ ಕಾರ್ಯಕ್ರಮಗಳು(ಬೇಡಿಕೆಗಳು)**

ಸುಮಾರು 1966ರಿಂದ1982ರವರೆಗೂ ಪ್ರಬಲವಾಗಿ ಅಸ್ತಿತ್ವದಲ್ಲಿದ್ದ ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯು 20ನೇ ಶತಮಾನದ ಮಧ್ಯಭಾಗದವರೆಗೂ ಕಪ್ಪುವರ್ಣೀಯರ ಮೇಲೆ ಬಿಳಿಯ ಸಮುದಾಯಗಳು ಮಾಡುತ್ತಿದ್ದ ಭೀಬತ್ಸ ಕೃತ್ಯಗಳಿಗೆ ಮೂಗುದಾರ ಹಾಕಲು ಸಿದ್ಧತೆಯನ್ನು ಮಾಡಿಕೊಂಡಿತು. ದಿನನಿತ್ಯ ಶೋಷಣೆಗೊಳಗಾಗುತ್ತಿದ್ದ ಕಪ್ಪುಜನರನ್ನು ಇಂತಹ ದುಸ್ಥಿತಿಗಳಿಂದ ಮುಕ್ತಗೊಳಿಸುವ ಸಲುವಾಗಿ ಪಾರ್ಟಿಯ ಪ್ರಣಾಳಿಕೆಯ 10 ಅಂಶಗಳ ಕಾರ್ಯಕ್ರಮವನ್ನು ಬಿಡುಗಡೆಗೊಳಿಸಿ ತನ್ನ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿತು. ಆ ಬೇಡಿಕೆಗಳೆಂದರೆ,

1. ಕಪ್ಪುವರ್ಣೀಯರಿಗೆ ಬಿಳಿಯರಂತೆ ಸ್ವಾತಂತ್ರ್ಯ ಮತ್ತು ಸಮಾನತೆ ಅಧಿಕಾರವನ್ನು ನೀಡುವುದು.
2. ಜೀವನವನ್ನು ಸ್ವತಂತ್ರವಾಗಿ ಸ್ವಾಭಿಮಾನದಿಂದ ನಿರ್ವಹಿಸಲು ಖಾಯಂ ಉದ್ಯೋಗಗಳನ್ನು ನೀಡುವುದು.
3. ಪ್ರತಿಯೊಂದು ಕಪ್ಪುಜನರ ಕುಟುಂಬಕ್ಕೂ 40 ಎಕರೆ ಕೃಷಿ ಭೂಮಿಯನ್ನು ನೀಡಿ, ಗುಲಾಮಗಿರಿ, ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವುದು.
4. ಕಪ್ಪುಜನರಿಗೆ ಜೀವಿಸಲು ಉತ್ತಮವಾದ ಸ್ವಂತ ನಿವೇಶನಗಳನ್ನು ಕಲ್ಪಿಸಿಕೊಡುವುದು.
5. ಉತ್ತಮ ಗುಣಮಟ್ಟದ ಶಿಕ್ಷಣ ಸೌಲಭ್ಯವನ್ನು ಒದಗಿಸಿ, ತಮ್ಮಗಳ ಸತ್ಯಘಟನೆಗಳ ಇತಿಹಾಸವನ್ನು ತಿಳಿಸಲು ಅನುಕೂಲ ಮಾಡಿಕೊಡುವುದು.
6. ಆಧುನಿಕ ವೈದ್ಯಕೀಯ ಸೇವೆಗಳನ್ನು ಒದಗಿಸುವುದರ ಮೂಲಕ ಕಪ್ಪುವರ್ಣೀಯರಿಗೆ ಉಚಿತ ಆರೋಗ್ಯ ತಪಾಸಣಾ ಸೌಕರ್ಯಗಳನ್ನು ಒದಗಿಸುವುದು.
7. ಕಪ್ಪುಜನರ ಮೇಲೆ ದ್ವೇಷ, ವೈಷಮ್ಯದಿಂದ ಕೂಡಿದ ಪೋಲೀಸ್ ದೌರ್ಜನ್ಯ, ಕೊಲೆ, ಸುಲಿಗೆಗಳನ್ನು ನಿಲ್ಲಿಸುವುದು.
8. ಎಲ್ಲಾ ರೀತಿಯ ಯುದ್ಧಗಳನ್ನು ನಿಲ್ಲಿಸಿ, ಕಪ್ಪುಜನಾಂಗಗಳಿಗೆ ಆತ್ಮರಕ್ಷಣೆಗಾಗಿ ಸರ್ಕಾರ ಶಸ್ತ್ರಾಸ್ತ್ರಗಳನ್ನು ನೀಡಬೇಕು.
9. ಎಲ್ಲಾ ರಾಜಕೀಯ ಖೈದಿಗಳಿಗೆ ನಗರ, ಪ್ರಾಂತೀಯ, ರಾಜ್ಯಗಳ ಸೆರೆಮನೆ ವಾಸದಿಂದ ಬಿಡುಗಡೆಗೊಳಿಸುವುದು. ಅಲ್ಲದೆ ನ್ಯಾಯಾಧೀಶ ಸ್ಥಾನಕ್ಕೆ ಕಪ್ಪುವರ್ಣೀಯರಿಗೂ ಅವಕಾಶವನ್ನು ನೀಡುವುದು.
10. ಉತ್ತಮವಾದ ದೈಹಿಕ ದೃಢತೆಯನ್ನು ಬಹುಕಾಲಗಳಿಂದಲೂ ಹೊಂದುತ್ತಾ ಬಂದಿರುವ ಕಪ್ಪುಜನಗಳನ್ನು ಸರ್ಕಾರದ ಮಿಲಿಟರಿ ಹುದ್ದೆಗಳಿಗೆ ಸೇರಿಸಿಕೊಳ್ಳಬೇಕು.

ಮುಂತಾದವುಗಳು ಪ್ರಮುಖವಾದವುಗಳಾಗಿದ್ದವು [17]. ಇವುಗಳನ್ನು ಜಾರಿಗೊಳಿಸುವಂತೆ ಮಾಡಲು ತನ್ನದೇ ಆದ ಹೋರಾಟ ಶೈಲಿಯನ್ನು ಕಂಡುಕೊಂಡಿತ್ತು.

- **ಬ್ಲಾಕ್ ಪ್ರಾಂಥರ್ಸ್‌ನ ಹೋರಾಟದ ಸ್ವರೂಪ**

ಬ್ಲಾಕ್ ಪ್ಯಾಂಥರ್ಸ್ ಪಾರ್ಟಿಯ ಕ್ರಾಂತಿಕಾರಿಗಳು ವಿದ್ಯಾವಂತರಾಗಿದ್ದು, ತಮ್ಮ ವಿದ್ಯಾಭ್ಯಾಸದ ಅವಧಿಯಿಂದಲೇ ಕಪ್ಪುವರ್ಣೀಯರ ಮೇಲಿನ ಬಿಳಿಯರ ದೌರ್ಜನ್ಯಗಳ ವಿರುದ್ಧ ತಮ್ಮದೇ ಆದ ಬರಹಗಳು, ಕವಿತೆಗಳು, ಕ್ರಾಂತಿಗೀತೆಗಳನ್ನು ಬರೆದು ಹಾಡುತ್ತಿದ್ದರು. ಜೊತೆಗೆ ದಬ್ಬಾಳಿಕೆಗಾರರ ವಿರುದ್ಧದ ಹೋರಾಟಗಳ ಸಂದರ್ಭಗಳಲ್ಲಿ ತಾವುಗಳು ಕೂಡ ಕಲಿಗಳಾಗಿ ಮುನ್ನುಗ್ಗುತ್ತಿದ್ದರು. ಮಾತ್ರವಲ್ಲದೆ ಬಿಳಿಯರು ಮಾಡುತ್ತಿದ್ದ ಶೋಷಣೆಗಳ ಅರಿವು ಮೂಡಿಸಲು ಅವಿದ್ಯಾವಂತ ಹಾಗೂ ವಿದ್ಯಾವಂತ ಕಪ್ಪುಜನರಿಗೆ ಸಭೆ, ಶಿಬಿರಗಳನ್ನು ಏರ್ಪಡಿಸಿ ಎಲ್ಲರೂ ಸಂಘಟಿತರಾಗಿ ಹೋರಾಡಲು ಸಿದ್ಧರಾಗಬೇಕೆಂದು ಅರ್ಥಪೂರ್ಣವಾದ ಮಾತುಗಳನ್ನು ಹೇಳುತ್ತಿದ್ದರು. ತಮ್ಮ ಸಂಘಟನೆಯ ಸದಸ್ಯರು ಮತ್ತು ಕಪ್ಪು ವಿದ್ಯಾರ್ಥಿ ಸಮಿತಿಯ ಪದಾಧಿಕಾರಿಗಳಿಗೆ ನಿರಂತರವಾಗಿ ಮಿಲಿಟರಿ ಮಾದರಿಯ ತರಬೇತಿಗಳನ್ನು, ರಾಜಕೀಯ ಶಿಕ್ಷಣವನ್ನು ನೀಡುತ್ತಾ ಶಿಸ್ತು, ನ್ಯಾಯವನ್ನು ಪಡೆಯುವ ದೃಢಸಂಕಲ್ಪವನ್ನು ಮಾಡುವಂತೆ ಮಾರ್ಗದರ್ಶನ ನೀಡುತ್ತಿದ್ದರು. ಜೊತೆಗೆ ಹೋರಾಟಗಳ ಅನಿವಾರ್ಯ ಸಂದರ್ಭಗಳಲ್ಲಿ ಸಾಯಲು ಹಾಗೂ ವಿರೋಧಿಗಳನ್ನು ಸಾಯಿಸಲು ತಮ್ಮ ಜೀವನವನ್ನು ತ್ಯಾಗ ಮಾಡುವಷ್ಟರ ಮಟ್ಟಿಗೆ ಶಿಬಿರಾರ್ಥಿಗಳನ್ನು ಮಾನಸಿಕವಾಗಿ ಸಿದ್ಧಗೊಳಿಸುತ್ತಿದ್ದರು [18].

ಇವುಗಳನ್ನು ಏರ್ಪಡಿಸಲು ಪಾರ್ಟಿಗೆ ಹಣಕಾಸಿನ ಮೂಲವಾಗಿ 'ದಿ ಬ್ಲಾಕ್ ಪ್ಯಾಂಥರ್ಸ್' ವಾರ್ತಾ ಪತ್ರಿಕೆಯ ಮಾರಾಟದಿಂದ ಬರುತ್ತಿದ್ದ ಹಣ, ಸಭೆ, ಸಮಾರಂಭಗಳಲ್ಲಿ ಭಾಷಣ ಮಾಡಿದಾಗ ಸಂಗ್ರಹವಾಗುತ್ತಿದ್ದ ಹಣ, ಪಾರ್ಟಿಯ ಕಪ್ಪುಕಲಾವಿದರ ಕಲಾಮಂಡಳಿಯ ಆರ್ಕೆಸ್ಟ್ರಾ ತಂಡದ ನಿಶ್ಚಿತಾರ್ಥ, ಕಾಲೇಜು ಆವರಣಗಳಲ್ಲಿ ಕಾರ್ಯಕ್ರಮಗಳಿಂದ ಬರುತ್ತಿದ್ದ ಹಣ ಹಾಗೂ ಸಂಘಟನೆಯ ಕೆಲಸಗಳ ಮೇಲೆ ಗೌರವವನ್ನಿಟ್ಟುಕೊಂಡಿದ್ದ ನಾಗರಿಕರ ಸಹಾಯದಿಂದ ಬರುತ್ತಿದ್ದ ಹಣ ಬಹುಮುಖ್ಯ ಪಾತ್ರವನ್ನು ವಹಿಸಿತ್ತು [19]. ಹ್ಯೂ ಪರ್ಸಿ ನ್ಯೂಟನ್ ಹೇಳುವಂತೆ 'ನಾವು ಎರಡು ಅನಿಷ್ಟ ಪಿಶಾಚಿಗಳ ವಿರುದ್ಧ ಹೋರಾಡಬೇಕಿದೆ. ಅವುಗಳೇ ಬಂಡವಾಳಶಾಹಿ ಹಾಗೂ ಜನಾಂಗೀಯ ದ್ವೇಷಿಗಳು. ಹೀಗಾಗಿ ನಾವು ಇವೆರಡನ್ನು ನಾಶಗೊಳಿಸಬೇಕಾಗಿದೆ'. ಈ ಮೂಲಕ ನಮಗೆ ಸಿಗಬೇಕಾಗಿರುವ ನಾಗರಿಕತ್ವ, ಶಿಕ್ಷಣ, ಉದ್ಯೋಗ ಹಾಗೂ ನಿವೇಶನಗಳನ್ನು ಹೋರಾಟದ ಮೂಲಕ ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ ಎಂದಿದ್ದರು [20].

ಈ ನಿಟ್ಟಿನಲ್ಲಿ ಪಾರ್ಟಿಯು ಕಾರ್ಯಪ್ರೌವೃತ್ತವಾಗಿ ಬಿಳಿಯರ ದೌರ್ಜನ್ಯಗಳ ವಿರುದ್ಧ ಸಂಘಟನಾತ್ಮಕ ಜಾಥಾಗಳು, ಗೋಡೆ ಬರಹಗಳು, ಕರಪತ್ರಗಳ ಹಂಚಿಕೆ, ವಾರ್ತಾ ಪತ್ರಿಕೆ ವಿತರಣೆ, ಕ್ರಾಂತಿಕಾರಿ ಗೀತೆಗಳು ಹಾಗೂ ಕ್ರಾಂತಿಕಾರಿ ಘೋಷಣೆಗಳನ್ನು ಕೂಗಿ

ಶೋಷಕರ ಜಂಗಾಬಲವನ್ನೇ ಕುಗ್ಗಿಸುತ್ತಿದ್ದರು. ಅಂತಹ ಘೋಷಣೆಗಳಲ್ಲಿ 'ಬ್ಲಾಕ್ ಇಸ್ ಬ್ಯೂಟಿಫುಲ್', 'ಪಿಕ್ ಅಪ್ ದ ಗನ್', 'ಆಲ್ ಪವರ್ ಟು ದ ಪೀಪಲ್–ಬ್ಲಾಕ್ ಪವರ್ ಟು ದ ಬ್ಲಾಕ್ ಪೀಪಲ್' ಮುಂತಾದವು ಪ್ರಮುಖವಾದವುಗಳು [21].

ಹೀಗೆ ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯು ಸುಮಾರು 17 ವರ್ಷಗಳ ತನ್ನ ತೀವ್ರಗತಿಯ ಹೋರಾಟಗಳಿಂದ ಕಪ್ಪುವರ್ಣೀಯರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ನ್ಯಾಯವನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾಯಿತು. ಅಲ್ಲದೆ ಭಾರತದಲ್ಲೂ ಇದರ ಕ್ರಾಂತಿಯ ಕಹಳೆ ಠೇಂಕರಿಸಿ ಜಾತಿವ್ಯವಸ್ಥೆ, ಅಸ್ಪೃಶ್ಯತಾಚರಣೆ ವಿರುದ್ಧ ಹೋರಾಡಲು ಭೀಮಸೇನೆ ಹಾಗೂ ದಲಿತ್ ಪ್ಯಾಂಥರ್ಸ್ ಸಂಘಟನೆಗಳು ವಿಕಾಸಗೊಳ್ಳಲು ಪ್ರೇರಣೆಯಾಯಿತು.

**ಭೀಮಸೇನೆ ಹಾಗೂ ದಲಿತ್ ಪ್ಯಾಂಥರ್ಸ್‌ಗಳ ವಿಕಾಸದಲ್ಲಿ ಇದರ ಅಸ್ಮಿತೆ**

ಭೀಮಸೇನೆ ಸಂಘಟನೆಯನ್ನು ಬಿ.ಶ್ಯಾಮಸುಂದರ್ ಎಂಬುವರು ಬಿ.ಎಸ್.ವೆಂಕಟರಾವ್ ಎಂಬ ದಲಿತೇತರ ವ್ಯಕ್ತಿಯ ಸಹಯೋಗದಿಂದ ಔರಂಗಾಬಾದ್ (ಈಗಿನ ಗುಲ್ಬರ್ಗಾ ಜಿಲ್ಲೆ) ನಲ್ಲಿ ಸ್ಥಾಪಿಸಿದರು.[22] ಈ ಸಂಘಟನೆಯ ಸ್ಥಾಪನೆಯ ಹಿಂದೆ ಬ್ಲಾಕ್ ಪ್ಯಾಂಥರ್ಸ್‌ನ ಜೊತೆಗೆ ಜ್ಯೋತಿ ಬಾಫುಲೆ, ಡಾ. ಬಿ.ಆರ್.ಅಂಬೇಡ್ಕರ್‌ರವರ ದಲಿತಪರ ತತ್ವ, ಚಿಂತನೆಗಳ ಪ್ರಭಾವ ಇರುವುದು ನಿಸ್ಸಂದೇಹ. ಜೊತೆಗೆ ಸಂಘಟನೆಯನ್ನು ಬಿ.ಶ್ಯಾಮಸುಂದರ್‌ರವರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿನ ದಲಿತರ ಸ್ಥಿತಿಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಏಪ್ರಿಲ್ [29], 1968ರಲ್ಲಿ ಅಂಬೇಡ್ಕರ್‌ರವರ 77ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸ್ಥಾಪಿಸಿದರು.[23] ಈ ಸಂಘಟನೆ 'ನೀಲಿ ಬಣ್ಣದ ಬಾವುಟ', ಮಧ್ಯದಲ್ಲಿ 'ಸೂರ್ಯನ ಚಿಹ್ನೆ', ಅದರ 'ಅಕ್ಕಪಕ್ಕ ನೇಗಿಲು', 'ಸುತ್ತಿಗೆ', 'ಬಾಣ'ಗಳನ್ನು ತನ್ನ ಲಾಂಛನವನ್ನಾಗಿ ಮಾಡಿಕೊಂಡಿತ್ತು. ಇದರಲ್ಲಿನ ಗುರುತುಗಳು ಮೂಲನಿವಾಸಿಗಳ ಸಂಸ್ಕೃತಿಯನ್ನು ಬಿಂಬಿಸುತ್ತಿದ್ದವು.

ಭೀಮಸೇನೆ ಸಂಘಟನೆಯು ತನ್ನದೇ ಆದ ಸಂವಿಧಾನವನ್ನು ಹೊಂದಿದ್ದು ಪ್ಯಾಂಥರ್ಸ್‌ನಂತೆ ಲಕ್ಷಾಂತರ ಕಾರ್ಯಕರ್ತರ ಸದಸ್ಯತ್ವವನ್ನು ಹೊಂದಿತ್ತು. ಅಲ್ಲದೆ ಕೈಯಲ್ಲೊಂದು ಲಾಠಿ, ಕಾಲಲ್ಲಿ ದಪ್ಪ ಚಪ್ಪಲಿ, ಪೌರುಷವನ್ನು ಸೂಚಿಸುವ ದಪ್ಪ ಮೀಸೆ ಬಿಡುವುದು ಇದರ ಸಮವಸ್ತ್ರದ ಲಕ್ಷಣಗಳಾಗಿದ್ದವು [24]. ಬಿ.ಶ್ಯಾಮಸುಂದರ್‌ರವರು ಇಲ್ಲಿನ ದಲಿತರಿಗೆ ಜ್ಞಾನದ ಬಂಗಾರದ ಕೀಲಿಕೈ ಆದ ಶಿಕ್ಷಣವನ್ನು ನೀಡಿ ಅವರಲ್ಲಿ ಸವರ್ಣೀಯರ ಅನ್ಯಾಯಗಳನ್ನು ಪ್ರಶ್ನಿಸಿ ಹೋರಾಡುವ ಆತ್ಮಸ್ಥೈರ್ಯವನ್ನು ಬೆಳೆಸಲು ಪ್ರಯತ್ನಿಸಿದರು. ಇದಕ್ಕಾಗಿ ಹೈದರಾಬಾದ್ ಸಂಸ್ಥಾನದಲ್ಲಿ ದಲಿತರಿಗೋಸ್ಕರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಇವುಗಳ ಮೂಲಕ ದಲಿತರಲ್ಲಿ ಜಾಗೃತಿ ಹಿಮ್ಮಡಿಗೊಳ್ಳುವಂತೆ ಮಾಡಿ ಸವರ್ಣೀಯರ ವಿರುದ್ಧ ದಂಗೆ ಏಳಲು ಪ್ರೇರೇಪಿಸಿದರು. ಆ ಸಮಯದಲ್ಲಿ ಈ ಸಂಘಟನೆಯ ಸದಸ್ಯರಾಗಿ ಭಾರತ ಸರ್ಕಾರದಲ್ಲಿ ಕೇಂದ್ರ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದ (2011) ಮಲ್ಲಿಕಾರ್ಜುನ ಖರ್ಗೆ, ಸಂಸದರಾಗಿದ್ದ ಧರ್ಮಸಿಂಗ್, ರಾಜಕಾರಣಿಗಳಾದ ಜಿ.ರಾಮಕೃಷ್ಣ, ಕೆ.ಬಿ. ಶಾಣಪ್ಪ, ಎಂ.ಎಲ್.ಸಿ. ಮಾರುತಿರಾವ್, ಡಿ ಮಾಲೆ ಮುಂತಾದವರು ದುಡಿದಿದ್ದಾರೆ. ಇವರ ಸಂಘಟನಾತ್ಮಕ ಹೋರಾಟದಿಂದ ಬಿ.ಶ್ಯಾಮಸುಂದರ್‌ರವರು ಬ್ಲಾಕ್ ಪ್ಯಾಂಥರ್‌ನಂತೆ ಸರ್ಕಾರದ ಮುಂದೆ ದಲಿತರ ಪರವಾಗಿ ಪ್ರಮುಖ ನಾಲ್ಕು ಬೇಡಿಕೆಗಳನ್ನು ಈಡೇರಿಸಲು ಮನವಿ ಸಲ್ಲಿಸಿದರು. ಅವುಗಳೆಂದರೆ.

1. ಪ್ರತಿ ತಾಲ್ಲೂಕಿನ 25 ಹಳ್ಳಿಗಳನ್ನು ದಲಿತರಿಗೆ ಬಿಟ್ಟುಕೊಡುವುದು
2. ದಲಿತರಿಗೋಸ್ಕರ ಪ್ರತ್ಯೇಕ ಚುನಾವಣೆ ವ್ಯವಸ್ಥೆಯನ್ನು ಜಾರಿಗೊಳಿಸುವುದು.
3. ಪ್ರತಿ ರಾಜ್ಯದಲ್ಲೂ ದಲಿತರಿಗೆ ಪ್ರತ್ಯೇಕ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು.
4. ದಲಿತರಿಗೆ ಪ್ರಬಲ ರಾಜಕೀಯ ವ್ಯವಸ್ಥೆಯನ್ನು ಜಾರಿಗೊಳಿಸುವುದು.

ಪ್ರಮುಖವಾದವುಗಳಾಗಿದ್ದವು [25]. ಇವುಗಳನ್ನು ಸರ್ಕಾರದ ಮೂಲಕ ಜಾರಿಗೊಳಿಸಲು ಬಿ. ಶ್ಯಾಮಸುಂದರ್‌ರವರು ತಮ್ಮ ಸಂಘಟನೆಯ ಪದಾಧಿಕಾರಿಗಳು, ಕಾರ್ಯಕರ್ತರ ನೆರವಿನೊಂದಿಗೆ ಹೋರಾಟ ನಡೆಸಿ ದಲಿತರ ಅಂಗರಕ್ಷಕರಾಗಿ ಗುರುತಿಸಿಕೊಂಡಿದ್ದರು. ಹೀಗೆ ಬಿ.ಶ್ಯಾಮಸುಂದರವರು ಅಮೇರಿಕಾದ ಬ್ಲಾಕ್ ಪ್ಯಾಂಥರನ ಕ್ರಾಂತಿಕಾರಿ ಗುಣಗಳನ್ನು ಬೆಳಸಿಕೊಂಡು 'ಭೀಮಸೇನೆ ಸಂಘಟನೆ'ಯನ್ನು ಸ್ಥಾಪಿಸುವುದರ ಮೂಲಕ ಮಹಾರಾಷ್ಟ್ರದಲ್ಲಿ 'ದಲಿತ ಪ್ಯಾಂಥರ್' ಎಂಬ ದಲಿತಪರ ಕ್ರಾಂತಿಕಾರಿ ಸಂಘಟನೆ ಹುಟ್ಟಲು ಕಾರಣರಾದರು ಎಂದು ಲೇಖಕ ಜಗನ್ನಾಥಸಿಂಧೆಯವರು ತಿಳಿಸಿದ್ದಾರೆ.

ಭೀಮಸೇನೆ ಸಂಘಟನೆಯಂತೆ ಮಹಾರಾಷ್ಟ್ರದಲ್ಲಿ 'ದಲಿತ್ ಪ್ಯಾಂಥರ್ಸ್ ಸಂಘಟನೆ' ಜುಲೈ, 1972ರಲ್ಲಿ ಸ್ಥಾಪನೆಯಾಯಿತು [26]. ಏಕೆಂದರೆ 1960ರ ನಂತರ ಮಹಾರಾಷ್ಟ್ರದಲ್ಲಿ ಜ್ಯೋತಿ ಬಾಫುಲೆ, ಡಾ.ಬಿ.ಆರ್. ಅಂಬೇಡ್ಕರ್‌ರವರ ದಲಿತಪರ ವಿಚಾರಧಾರೆಗಳು ಅಲ್ಲಿನ ದಲಿತ ವಿದ್ಯಾವಂತರಲ್ಲಿ ನೈತಿಕ ಶಕ್ತಿಯನ್ನು ತುಂಬಿದ್ದರಿಂದ 'ದಲಿತ ಸಾಹಿತ್ಯ'ವೆಂಬುದು ರಚನೆಯಾಗಲು ಪ್ರಾರಂಭವಾಗಿತ್ತು. ಇದರಿಂದಾಗಿ ಅಣ್ಣಾಭಾವು ಸಾಠೆ ಹಾಗೂ ಶಂಕರ್‌ರಾವ್ ಖರಾತ್ ಎಂಬುವವರು 'ಪ್ರಥಮ ಮಹಾರಾಷ್ಟ್ರ ದಲಿತ ಸಾಹಿತಿ'ಗಳಾಗಿ ಮರಾಠಿಗರಲ್ಲಿ ಬ್ಲಾಕ್ ಪ್ಯಾಂಥರ್ಸ್‌ನ ಕಪ್ಪುಪ್ರಜ್ಞೆಯಂತೆ ದಲಿತಪ್ರಜ್ಞೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು [27]. ಇದಕ್ಕಾಗಿಯೇ ದಲಿತಪರ ಕಾಳಜಿಯುಳ್ಳ ದಲಿತ ಲೇಖಕರನ್ನು ಒಂದು ವೇದಿಕೆಗೆ ತರಲು 02 ಮಾರ್ಚ್, 1958ರಲ್ಲಿ ಮುಂಬೈನಲ್ಲೂ, ಜನವರಿ 17–18, 1976ರಲ್ಲಿ ನಾಗಪುರದಲ್ಲೂ 'ದಲಿತ ಸಾಹಿತ್ಯ ಸಮ್ಮೇಳನ'ಗಳನ್ನು ನಡೆಸಲಾಗಿತು [28].

ಇದರಿಂದಾಗಿ ದಲಿತ ಲೇಖಕರು ಅನಕ್ಷರಸ್ಥ ದಲಿತರಲ್ಲಿ ಸವರ್ಣೀಯರ ದೌರ್ಜನ್ಯಗಳನ್ನು ಎದುರಿಸುವ ಪ್ರಜ್ಞೆಯನ್ನು ಬೆಳೆಸಲು ಕವಿಗಳಾಗಿ, ಕಲಿಗಳಾಗಿ ಶ್ರಮಿಸಿದರು. ಇದಕ್ಕಾಗಿ 'ದಲಿತ್ ಪ್ಯಾಂಥರ್ಸ್' ಸಂಘಟನೆಯನ್ನು ಸ್ಥಾಪಿಸಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳಿಗಾಗಿ ಹೋರಾಡಲು ಮುಂದಾದರು. ಈ ಸಂಘಟನೆಗೆ ರಾಮಮನೋಹರ ಲೋಹಿಯಾರವರ 'ಸಮಾಜವಾದಿ ಸಿದ್ಧಾಂತ'ಗಳ ಪ್ರಭಾವದಿಂದ ದೇಶದಾದ್ಯಂತ ಸ್ಥಾಪನೆಯಾಗಿದ್ದ 'ಸಮಾಜವಾದಿ ಯುವಸಭಾ', 'ಯುವಕ ಅಘಾಡಿ', 'ಯುವಕ ಕ್ರಾಂತಿ ದಳ' ಎಂಬ ವಿದ್ಯಾರ್ಥಿ ಸಂಘಟನೆಗಳ ಬೆಂಬಲವಿತ್ತು. ಇದರಿಂದಾಗಿಯೇ ಸಮಾಜವಾದಿ ಯುವಜನ ಸಭಾದಲ್ಲಿದ್ದ ಸಾಹಿತಿ ನಾಮದೇವ ಢಸಾಳ, ಜೆ.ವಿ. ಪವಾರ್, ಅರ್ಜುನ ಡಾಂಗಳೆ, ಗಿರ್ಕಾರ್, ಚಂದ್ವಾಂಕರ್, ರಾಮದಾಸ್ ಸೊಟೆನ್, ಥೋರಟ್, ಅರ್ಜುನ ಕಸಬೆ, ಶಂಕರರಾವ್ ಖರಾತ್ ಮುಂತಾದವರು ಈ ದಲಿತ ಪ್ಯಾಂಥರ್ ಸಂಘಟನೆಯನ್ನು ಸ್ಥಾಪಿಸಲು ಸಾಧ್ಯವಾಯಿತು. ಈ ಸಮಯದಲ್ಲಿ ಯುವಕ ಅಘಾಡಿ ವಿದ್ಯಾರ್ಥಿ ಸಂಘಟನೆಯ ರಾಜಾಢಾಲೆ ಎಂಬುವವರು ಕೂಡ ಉಪಸ್ಥಿತರಿದ್ದರು [29]. ಈ ಸಂಘಟನೆಯ ಪ್ರಥಮ ಮುಕ್ತಸಭೆ 09 ಜುಲೈ, 1972ರಲ್ಲಿ ಬಾಂಬೆಯ ಸಿದ್ಧಾರ್ಥನಗರದಲ್ಲಿ ನಡೆಯಿತು. ಈ ಸಭೆಯಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲೂ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಮಟ್ಟಹಾಕಲು ದಲಿತ್ ಪ್ಯಾಂಥರ್ಸ್

ಸಂಘಟನೆ ಮುಂದಾಗಬೇಕು. ಇದಕ್ಕೆ ದಲಿತ ವಿದ್ಯಾರ್ಥಿ ಪಡೆ ಹೆದರದೆ ಸವರ್ಣೀಯರ ಅನ್ಯಾಯವನ್ನು ಖಂಡಿಸಿ ಹೋರಾಟಕ್ಕಿಳಿಯಬೇಕು ಎಂದು ತೀರ್ಮಾನಿಸಲಾಯಿತು. ಜೊತೆಗೆ ತಮ್ಮ ಹೋರಾಟಗಳಲ್ಲಿ ಸವರ್ಣೀಯರನ್ನು ವಿರೋಧಿಸುವ ಕರಪತ್ರಗಳು, ಘೋಷಣೆಗಳು, ಗೋಡೆಬರಹಗಳು ಮುಂತಾದವನ್ನು ಬಳಸಬೇಕೆಂದು ನಿರ್ಧರಿಸಲಾಯಿತು.

ದಲಿತ್ ಪ್ಯಾಂಥರ್ಸ್ ಸಂಘಟನೆಯ ದಲಿತಪರ ಕಾಳಜಿಯಿಂದಲೇ 1972ರಿಂದ1974ರ ಅವಧಿಯ ವೇಳೆಗೆ ನಾಸಿಕ್, ದೇವ್ಲಲಿ, ಪರಲಿ, ಕಲಮ್, ಲಾತೂರ್, ನಾಂದೇಡ್, ಬೀಡ್, ಪುಣೆ, ಬೆಳಗಾಂ, ನಿಪ್ಪಾಣಿ, ಸಾಂಗ್ಲಿ, ಸತಾರ, ಸೋಲಾಪುರ, ಜಲ್ಗಾವ್, ಚಾಲ್ಲಿಸ್‌ಗಾವ್, ಬೂಸ್ವಾಲ್, ಬಲ್ದಾನ, ಔರಂಗಬಾದ್, ಡುಲಿ, ಡಿಗ್ರಾನ್, ಪುಸಾದ್, ಪಾಲಗಾವ್, ವಾರ್ಧಾ, ಅಂಕೋಲ, ನಾಗ್ಪುರ, ಕಟೋಲ್, ಕಮಟಿ, ಸವ್ನರ, ಚಂದ್ರಪುರ, ಯವತ್ಮಲ್, ಭಂದ್ರಾ, ಬಲ್ಲಾಪುರ, ಅಹಮದಾಬಾದ್, ದೆಹಲಿ, ಬಿಂದ್ವಾಡ, ಭೂಪಾಲ್ ಮತ್ತು ಹಿಂಗಾನ್‌ಘಟ್ಟ ಮುಂತಾದ ಸ್ಥಳಗಳಲ್ಲಿ ಇದರ ಶಾಖೆಗಳು ಪ್ರಾರಂಭವಾದವು. ಅಲ್ಲದೆ ಲಂಡನ್‌ನಲ್ಲೂ ಗಾಮರೆ ನೇತೃತ್ವದಲ್ಲಿ ದಲಿತ್ ಪ್ಯಾಂಥರ್ಸ್ ಸಂಘಟನೆಯ ಶಾಖೆ ಪ್ರಾರಂಭವಾಯಿತು [30]. ಈ ಸಂಘಟನೆ ತನ್ನ ಪ್ರಣಾಳಿಕೆಯನ್ನು ಜಾರಿಗೆ ತರಲು ಸಮಿತಿಗಳನ್ನು ರಚಿಸಿಕೊಂಡು ಪದಾಧಿಕಾರಿಗಳು, ಕಾರ್ಯಕರ್ತರ ನೆರವಿನಿಂದ ಚುನಾವಣೆಯನ್ನು ಬಹಿಷ್ಕರಿಸುವ, ದಲಿತರ ಮೇಲೆ ಸವರ್ಣೀಯರ ದೌರ್ಜನ್ಯಗಳ ವಿರುದ್ಧ ಹೋರಾಡುವ, ಭೂಮಾಲೀಕರು, ಜಮೀನ್ದಾರರು, ಬಂಡವಾಳಶಾಹಿಗಳು ಹಾಗೂ ಸರ್ಕಾರದಿಂದ ದಲಿತರಿಗಾಗುತ್ತಿದ್ದ ಭೂ ವಂಚನೆಗಳನ್ನು ಚಳುವಳಿಯ ಮೂಲಕ ತಡೆಯುವ ಕೆಲಸಗಳಲ್ಲಿ ಮಗ್ನವಾಗಿತ್ತೆಂದು ಲತಾಮುರುಗಕರ್‌ರವರು ತಿಳಿಸಿಕೊಟ್ಟಿದ್ದಾರೆ [31].

**ಉಪಸಂಹಾರ**

ಹೀಗೆ ಬ್ಲಾಕ್ ಪ್ಯಾಂಥರ್ಸ್ ಪಾರ್ಟಿಯ ಕ್ರಾಂತಿಯ ಕಹಳೆಯಿಂದ ಭೀಮಸೇನೆಯಂತೆ ದಲಿತ್ ಪ್ಯಾಂಥರ್ಸ್ ಸಂಘಟನೆ ಕೂಡ ಉಗಮವಾಗಿ ಮಹಾರಾಷ್ಟ್ರದಾದ್ಯಂತ 1972–1979ರ ಅವಧಿಯಲ್ಲಿ ದಲಿತರ ಬಾಳಿಗೆ ನಾಡಿ ಮಿಡಿತವಾಗಿ ಭ್ರಷ್ಟ ಸವರ್ಣೀಯರ ಜಂಗಾಬಲವನ್ನು ಅಡಗಿಸುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ಅಲ್ಲದೆ ಬೇರೆ ರಾಜ್ಯಗಳು ಕೂಡ ದಲಿತ್ ಪ್ಯಾಂಥರ್ಸ್‌ನ ಕ್ರಾಂತಿಕಾರಿ ಸಂಘಟನಾತ್ಮಕ ಗುಣವನ್ನು ಬೆಳಸಿಕೊಳ್ಳುವಂತೆ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿತ್ತು. ಇದರಿಂದಾಗಿಯೇ ಕರ್ನಾಟಕದಲ್ಲಿ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' (ಕ.ದ.ಸಂ.ಸ.) ಎಂಬ ದಲಿತ ಸಂಘಟನೆ ಮೊಳಕೆ ಹೊಡೆಯುತ್ತ ಹೆಮ್ಮರವಾಗಿ ರಾಜ್ಯದಾದ್ಯಂತ ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಯಿತು.

**ಕೊನೆಟಿಪ್ಪಣಿಗಳು**


1. J.A. Tillinghast, The Negro in Africa and America, Newyork, 1902, Pp1-2.
2. Mann stuart E., An Indo European Comparative Dictionary, Humberg, Helmut Buske Verlag, 1984, Pp 858.
3. Lata Murugkar, Dalit Panther Movement, Bombay Popular Prakashan, 1991, Pp195.
4. THE TALKING DRUM.COM, A Brief History of the Black Panther Party and Its Place in the Black Liberation movement by Sundiata Acoli.
5. http://www.violent crimes: Black on White and White on Black.
6. ಎಂ.ಪಿ. ಭುವನೇಶ್ವರ್ ಪ್ರಸಾದ್, ದಲಿತರ ದಿವ್ಯಚೇತನ ಮಹಾತ್ಮಫುಲೆ, 2010, ಪುಟ21.
7. Booker T. Washington 1856-1915, Sources:From ENCYCLOPEDIA OF SOTHERN CULTURE, edited by Charles Reagon Wilson and William Ferris copy right, The Unversity North Carolina Press, 1989.
8. Lata Murugkar, Dalit Panther Movement, Bombay Popular Prakashan, 1991, Pp191.
9. Ibid……, Pp190.
10. Government of Karnataka, Social Science Text book (Revised), Karnataka Text Book Society, Bengaluru, 2019, Pp38-39,44.
11. www.black panther Wikipedia, The free encyclopedia.
12. Lata Murugkar, Dalit Panther Movement, Bombay Popular Prakashan, 1991, Pp192.
13. Ibid……
14. www.black panther Wikipedia, The free encyclopedia.
15. Ibid…….
16. Marine Gene, The Black Panthers, Signet, New American Library, 1969, Pp56.
17. Manifesto of Black Panther Part, in Negro Almanac, Bicentennial edition 1976, Pp134-135.
18. Marine Gene, The Black Panthers, Signet, New American Library, 1969, Pp45.
19. Lata Murugkar, Dalit Panther Movement, Bombay Popular Prakashan, 1991, Pp194.
20. Ibid....., Pp198.
21. On the Black Panther Party, Speech at second nations conference of Marxit and Leninist parties, USA fall 1984, Pp9,11-13.
22. ಜಗನ್ನಾಥ್ ಸಿಂಧೆ, ದಲಿತ ಚಿಂತಕ ಬಿ.ಶ್ಯಾಮಸುಂದರ್, 20005, ಪುಟ8.
23. Lata Murugkar, Dalit Panther Movement, Bombay Popular Prakashan, 1991, Pp43.
24. ಎಂ.ಎಸ್. ಶೇಖರ್, ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು, 2006, ಪುಟ83.
25. ಅದೇ......, ಪುಟ 80–84, 77.
26. Lata Murugkar, Dalit Panther Movement, Bombay Popular Prakashan, 1991, Pp84,77.
27. Ibid.......56.
28. ಎಸ್. ಗಣೇಶನ್, ದಲಿತ ಸಾಹಿತ್ಯ ಚಳವಳಿ, 1982, ಪುಟ6.
29. ಪಂಚಮ, ಜೂನ್ 1–15, 1990, ಪುಟ9.
30. Lata Murugkar, Dalit Panther Movement, Bombay Popular Prakashan, 1991, Pp64.
31. Ibid......66.